SINDHI PRE UNIVERSITY COLLEGE

#68, Chokkanahalli, Thanisandra Main Road, Yelahanka, Bengaluru – 560064

Date : 22-10-2026

Instructions regarding ONLINE registration for Repeaters and Result Improvement candidates for the II PUC Examination-1, Feb/March -2027

1. Candidates must apply ONLINE using the Link provided on the KSEAB websites **https://dpue-exam.karnataka.gov.in/PUC2027PFRRREG/** and **https://kseab.karnataka.gov.in.**

2. The candidate must first create a USER ID and PASSWORD for submitting the application using their mobile number.

3. LOGIN using the USER ID and PASSWORD and then submit the application.

4. If the candidate enters the registration number as mentioned in their latest failed marks card or admission ticket, the student's information, failed subjects, and the fee to be paid will be auto-displayed. Then upload the photograph (PHOTO) (SCANNED PHOTO SIZE = 20 KB to 80 KB; FORMAT = JPG). If the registration number is not available, contact the college or contact PU Department helpline: 9448772500, 9886082073, 9663657041.

5. The fee amount must be paid through ONLINE mode. Then DOWNLOAD the receipt and application available ONLINE, take a printout, and keep it safely till the completion of the examination. It must be produced when asked for verification by the Board.

6. Fresh candidates who passed in II PUC Examination-1 and Examination-2 held in 2026 can register for II PUC Examination-1, 2027 for result improvement by paying the prescribed fee for the subjects they wish or for all subjects. If the said candidates improve their results, they shall surrender their previous original passed marks card to the Joint Director (PU Examination), Karnataka School Examination and Assessment Board, 6th Cross Road, Malleswaram, Bengaluru - 560003 and obtain a new marks card.

7. Only candidates who registered as fresh students and private candidates in 2026 and passed/failed will be eligible for result improvement. Candidates of 2025 and previous years are not eligible for result improvement.

Last date for applying and making online payment: 21-11-2026

Last date with fine of Rs. 75/- per day: 05-12-2026

Fee Details

- One Subject - Rs. 210/-
- Two Subject – Rs. 405/-
- Three & Above - Rs. 600/-

Fee Details for Result Improvement

- Per Subject : Rs. 525/- + Marks Card Fee 75

PRINCIPAL
22/10/26

PRINCIPAL
SINDHI PRE-UNIVERSITY COLLEGE
68, Chokkanahalli, Thanisandra Main Road
Yelahanka, Bengaluru-560 064.

ಕರ್ನಾಟಕ ಸರ್ಕಾರ
ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು-560 003

ಸಂಖ್ಯೆ: ಕೆಎಸ್ಇಎಬಿ/ ಪಿ.ಯು.ಪ1/ಪು.ಅ.ನೋ/2026-27 ದಿನಾಂಕ: 13 -10-2026

ಸು ತ್ತೋ ಲೆ

ವಿಷಯ: 2027 ರ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ ಪುನರಾವರ್ತಿತ ಅಭ್ಯರ್ಥಿಗಳು ಹಾಗೂ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಇಚ್ಛಿಸುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಇಪಿ. 282 ಎಸ್ಎಚ್ಎಚ್ 2025, ಬೆಂಗಳೂರು ದಿನಾಂಕ: 12-02-2026.
2. ಸರ್ಕಾರದ ಆದೇಶ ಸಂಖ್ಯೆ ಇಪಿ 30. ಎಸ್ಹೆಚ್ಹೆಚ್ 2026, ದಿನಾಂಕ:17-09-2026.

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ 2027ರ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ ಪುನರಾವರ್ತಿತ ಅಭ್ಯರ್ಥಿಗಳು ಹಾಗೂ ಫಲಿತಾಂಶ ಉತ್ತಮಪಡಿಸಿಕೊಳ್ಳುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಕೆಳಕಂಡಂತೆ ದಿನಾಂಕ ನಿಗದಿಪಡಿಸಲಾಗಿದೆ. ಈ ಸುತ್ತೋಲೆಯನ್ನು ಕಡ್ಡಾಯವಾಗಿ ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸುವುದು.

2027ರ ದ್ವಿತೀಯ ಪಿಯುಸಿ ಪರೀಕ್ಷೆ-1 ಕ್ಕೆ ಪುನರಾವರ್ತಿತ ಅಭ್ಯರ್ಥಿಗಳು ಹಾಗೂ ಫಲಿತಾಂಶ ಉತ್ತಮಪಡಿಸಿಕೊಳ್ಳುವ ಅಭ್ಯರ್ಥಿಗಳು ದಿನಾಂಕ: 13-10-2026 ರಿಂದ ONLINE ನಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ನೇರವಾಗಿ ಕಾಲೇಜಿನಲ್ಲಿ ನೊಂದಾಯಿಸಿಕೊಳ್ಳಲು ಅವಕಾಶ ಇರುವುದಿಲ್ಲ.

2027ರ ದ್ವಿತೀಯ ಪಿಯುಸಿ ಪರೀಕ್ಷೆ-1 ಕ್ಕೆ ಪುನರಾವರ್ತಿತ ಹಾಗೂ ಫಲಿತಾಂಶ ಉತ್ತಮ ಪಡಿಸಿಕೊಳ್ಳುವ ಅಭ್ಯರ್ಥಿಗಳು ONLINE ಮೂಲಕ ನೋಂದಣಿಯಾಗುವ ಕುರಿತು ಸೂಚನೆಗಳು: -

1. ಅಭ್ಯರ್ಥಿಗಳು ONLINE ನಲ್ಲಿ ಅರ್ಜಿ ಸಲ್ಲಿಸಲು ಮಂಡಲಿಯಿಂದ ನೀಡಿರುವ https://dpue-exam.karnataka.gov.in/PUC2027PFRRREG ಲಿಂಕ್ ಅನ್ನು ಬಳಸಿ ಅಥವಾ ಮಂಡಲಿಯ https://kseab.karnataka.gov.in ಅಂತರ್ಜಾಲದಲ್ಲಿ ಕೊಟ್ಟಿರುವ ಮೆನುವನ್ನು ಬಳಸಿ ಅರ್ಜಿ ಸಲ್ಲಿಸಬೇಕು.
2. ಅಭ್ಯರ್ಥಿಯು ತಮ್ಮ ಮೊಬೈಲ್ ನಂಬರ್ ಉಪಯೋಗಿಸಿಕೊಂಡು ಮೊದಲು ಅರ್ಜಿ ಸಲ್ಲಿಸಲು USER ID ಮತ್ತು PASSWORD ಅನ್ನು ಸೃಜನೆ ಮಾಡಿಕೊಳ್ಳಬೇಕು.

3. USER ID ಮತ್ತು PASSWORD ಅನ್ನು ಉಪಯೋಗಿಸಿಕೊಂಡು LOGIN ಆಗಿ ನಂತರ ಅರ್ಜಿ ಸಲ್ಲಿಸುವುದು.
4. ಅಭ್ಯರ್ಥಿಯು ತನ್ನ ಇತ್ತೀಚಿನ ಅನುತ್ತೀರ್ಣ ಅಂಕಪಟ್ಟಿ ಅಥವಾ ಪ್ರವೇಶ ಪತ್ರದಲ್ಲಿರುವ ನೋಂದಣಿ ಸಂಖ್ಯೆಯನ್ನು ನಮೂದಿಸಿದರೆ ವಿದ್ಯಾರ್ಥಿಯ ಮಾಹಿತಿ ಮತ್ತು ಅನುತ್ತೀರ್ಣವಾಗಿರುವ ವಿಷಯಗಳು ಹಾಗೂ ಪಾವತಿಸಬೇಕಾದ ಶುಲ್ಕವು ಸ್ವಯಂ ಪ್ರಕಟವಾಗುತ್ತದೆ. ನಂತರ ಭಾವಚಿತ್ರವನ್ನು (PHOTO) UPLOAD ಮಾಡಬೇಕು. (SCANNED PHOTO SIZE = 20 KB to 80 KB; FORMAT = JPG)
ನೋಂದಣಿ ಸಂಖ್ಯೆ ಲಭ್ಯವಿಲ್ಲದಿದ್ದಲ್ಲಿ, ಕಾಲೇಜಿನ ಪ್ರಾಂಶುಪಾಲರನ್ನು ಅಥವಾ ಸಹಾಯವಾಣಿ ಸಂಖ್ಯೆ: 9448772500, 9886082073, 9663657041 ಅನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.
5. ಶುಲ್ಕದ ಮೊತ್ತವನ್ನು ONLINE ಮೂಲಕ ಪಾವತಿ ಮಾಡಬೇಕು. ನಂತರ ONLINE ನಲ್ಲಿ ಲಭ್ಯಗೊಳ್ಳುವ ರಸೀತಿ ಮತ್ತು ಅರ್ಜಿಯನ್ನು DOWNLOAD ಮಾಡಿ, ಮುದ್ರಿಸಿಕೊಂಡು ಪರೀಕ್ಷೆ ಮುಗಿಯುವವರೆಗೂ ಜೋಪಾನವಾಗಿ ಇಟ್ಟುಕೊಳ್ಳಬೇಕು. ಮಂಡಲಿಯಿಂದ ಪರಿಶೀಲನೆಗೆ ಕೇಳಿದಾಗ ಪ್ರಸ್ತುತ ಪಡಿಸಬೇಕು.
6. 2027ರ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ ಪುನರಾವರ್ತಿತ ಅಭ್ಯರ್ಥಿಗಳಾಗಿ ONLINE ನಲ್ಲಿ ನೋಂದಾಯಿಸಿಕೊಂಡು ನಿಗದಿತ ಶುಲ್ಕ ಪಾವತಿಸಿದ ವಿದ್ಯಾರ್ಥಿಗಳ ಮಾಹಿತಿಯನ್ನು KSEAB ಜಾಲತಾಣದ PU Exam Portal ನ Principal Login ನ ಚೆಕ್‌ಲಿಸ್ಟ್‌ನಲ್ಲಿ ಲಭ್ಯಗೊಳಿಸಲಾಗುತ್ತಿದೆ.
7. 2026ರಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆ-1 ಮತ್ತು ಪರೀಕ್ಷೆ-2ರಲ್ಲಿ ಉತ್ತೀರ್ಣರಾದ ಹೊಸ ಹಾಗೂ ಖಾಸಗಿ ಅಭ್ಯರ್ಥಿಗಳು ಫಲಿತಾಂಶ ಉತ್ತಮಪಡಿಸಿಕೊಳ್ಳಲು ತಾವು ಇಚ್ಛಿಸಿದ ವಿಷಯಗಳಿಗೆ ಅಥವಾ ಎಲ್ಲಾ ವಿಷಯಗಳಿಗೆ ನಿಗದಿತ ಶುಲ್ಕ ಪಾವತಿಸಿ 2027ರ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ ನೋಂದಾಯಿಸಿಕೊಳ್ಳಬಹುದು. ಸದರಿ ಅಭ್ಯರ್ಥಿಗಳು ಫಲಿತಾಂಶ ಉತ್ತಮಪಡಿಸಿಕೊಂಡಲ್ಲಿ, ತಮ್ಮ ಹಿಂದಿನ ಮೂಲ ಉತ್ತೀರ್ಣ ಅಂಕಪಟ್ಟಿಯನ್ನು **ಜಂಟಿ ನಿರ್ದೇಶಕರು (ಪಿಯು ಪರೀಕ್ಷೆ), ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003 ರವರಿಗೆ ಸಲ್ಲಿಸಿ** ಹೊಸ ಅಂಕಪಟ್ಟಿಯನ್ನು ಪಡೆಯುವುದು.
8. ಫಲಿತಾಂಶ ಉತ್ತಮಪಡಿಸಿಕೊಳ್ಳಲು ಪರೀಕ್ಷೆ ತೆಗೆದುಕೊಂಡ ಅಭ್ಯರ್ಥಿಗಳ ಮಾಹಿತಿಯನ್ನು KSEAB ಜಾಲತಾಣದ PU Exam Portal Principal Login ನ ಚೆಕ್‌ಲಿಸ್ಟ್‌ನಲ್ಲಿ ಲಭ್ಯಗೊಳಿಸಲಾಗುವುದು. ಸದರಿ ಚೆಕ್‌ಲಿಸ್ಟ್‌ನ ಮುದ್ರಿತ ಪ್ರತಿಯನ್ನು ದೃಢೀಕರಿಸಿ ಪ್ರಾಂಶುಪಾಲರು ತಮ್ಮ ಜಿಲ್ಲೆಯ ಉಪನಿರ್ದೇಶಕರು (ಪದವಿ ಪೂರ್ವ) ರವರ ಕಛೇರಿಗೆ ಸಲ್ಲಿಸುವುದು.
9. 2026ರ **ಹೊಸ** ವಿದ್ಯಾರ್ಥಿಗಳು ಹಾಗೂ ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಿಕೊಂಡು ಉತ್ತೀರ್ಣ/ ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ ಮಾತ್ರ ಫಲಿತಾಂಶ ಉತ್ತಮಪಡಿಸಿಕೊಳ್ಳಲು ಅವಕಾಶವಿರುತ್ತದೆ. 2025 ಹಾಗೂ ಹಿಂದಿನ ಸಾಲಿನ ಅಭ್ಯರ್ಥಿಗಳಿಗೆ ಫಲಿತಾಂಶ ಉತ್ತಮಪಡಿಸಿಕೊಳ್ಳಲು ಅವಕಾಶವಿರುವುದಿಲ್ಲ.

2027 ರ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ

ಅ) ಪುನರಾವರ್ತಿತ ಅಭ್ಯರ್ಥಿಗಳು ಪಾವತಿಸಬೇಕಾದ ಶುಲ್ಕದ ವಿವರ:

ಪರೀಕ್ಷಾ ಶುಲ್ಕ (ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಪ್ರವರ್ಗ-1ರ ವಿದ್ಯಾರ್ಥಿಗಳನ್ನು ಹೊರತುಪಡಿಸಿ)	
ಒಂದು ವಿಷಯಕ್ಕೆ	ರೂ. 210/-
ಎರಡು ವಿಷಯಕ್ಕೆ	ರೂ. 405/-
ಮೂರು ಅಥವಾ ಹೆಚ್ಚಿನ ವಿಷಯಗಳಿಗೆ	ರೂ. 600/-

ಆ) ಫಲಿತಾಂಶ ಉತ್ತಮಪಡಿಸಿಕೊಳ್ಳುವ ಅಭ್ಯರ್ಥಿಗಳು ಪಾವತಿಸಬೇಕಾದ ಶುಲ್ಕದ ವಿವರ:

ಪ್ರಥಮ ಬಾರಿಗೆ ಒಂದು ವಿಷಯಕ್ಕೆ **(2026 ರ ಪರೀಕ್ಷೆ-1 ರಲ್ಲಿ ಉತ್ತೀರ್ಣರಾಗಿ ಪರೀಕ್ಷೆ – 2 ಕ್ಕೆ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ನೋಂದಯಿಸದ ಅಭ್ಯರ್ಥಿಗಳಿಗೆ)**	ರೂ. 263/-
ಎರಡನೇ ಹಾಗೂ ನಂತರದ ಪ್ರಯತ್ನಕ್ಕೆ ಒಂದು ವಿಷಯಕ್ಕೆ	ರೂ. 525/-
ಅಂಕಪಟ್ಟಿ ಶುಲ್ಕ	ರೂ. 75/-

2027 ರ ದ್ವಿತೀಯ ಪಿಯುಸಿ ಪರೀಕ್ಷೆ-1 ಕ್ಕೆ ಪುನರಾವರ್ತಿತ ಅಭ್ಯರ್ಥಿಗಳು ಹಾಗೂ ಫಲಿತಾಂಶ ಉತ್ತಮಪಡಿಸಿಕೊಳ್ಳುವ ಅಭ್ಯರ್ಥಿಗಳು ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕಗಳು:

ಕ್ರ. ಸಂ.	ವಿವರ	ಅಭ್ಯರ್ಥಿಗಳು ಶುಲ್ಕ ಪಾವತಿಸಲು ಕೊನೆಯ ದಿನಾಂಕ	ಕಾಲೇಜಿನ ಪ್ರಾಂಶುಪಾಲರು ಚೆಕ್‌ಲಿಸ್ಟ್ ಅನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸಬೇಕಾದ ದಿನಾಂಕ
1	ದಂಡ ಶುಲ್ಕ ಇಲ್ಲದೆ	**21-11-2026**	**23-11-2026**
2	ದಂಡ ಶುಲ್ಕದೊಂದಿಗೆ ರಜಾ ದಿನಗಳನ್ನು ಹೊರತುಪಡಿಸಿ ಪರೀಕ್ಷಾ ಶುಲ್ಕದ ಜೊತೆಗೆ ದಿನವೊಂದಕ್ಕೆ ರೂ. 75-00 ರಂತೆ ಗರಿಷ್ಠ ರೂ.750-00.	**05-12-2026**	**07-12-2026**

ಕಾಲೇಜಿನ ಪ್ರಾಂಶುಪಾಲರು ಚೆಕ್‌ಲಿಸ್ಟ್ ಅನ್ನು ಕಾಲೇಜಿನ ಸಂಕೇತ ಸಂಖ್ಯೆ ಮತ್ತು ವಿಳಾಸದೊಂದಿಗೆ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಕಡ್ಡಾಯವಾಗಿ **"ಪುನರಾವರ್ತಿತ ಅಭ್ಯರ್ಥಿಗಳ ಹಾಗೂ ಫಲಿತಾಂಶ ಉತ್ತಮಪಡಿಸಿಕೊಳ್ಳುವ ಅಭ್ಯರ್ಥಿಗಳ ಅರ್ಜಿಗಳು" (ದಂಡಶುಲ್ಕ ರಹಿತ)** ಎಂದು ನಮೂದಿಸಿ **ದಿನಾಂಕ: 23-11-2026 ಒಳಗೆ** ಮತ್ತು ದಂಡ ಶುಲ್ಕ ಸಹಿತ ಅರ್ಜಿಗಳನ್ನು **ದಿನಾಂಕ: 07-12-2026 ರಂದು** ಸಲ್ಲಿಸುವುದು.

ಜಿಲ್ಲಾ ಉಪನಿರ್ದೇಶಕರು ಪ್ರಾಂಶುಪಾಲರಿಂದ ಸ್ವೀಕರಿಸಿದ "ಚೆಕ್‌ಲಿಸ್ಟ್ ಗಳನ್ನು" ಪರಿಶೀಲಿಸಿ ತಮ್ಮ ಕಛೇರಿಯಲ್ಲಿಯೇ ಕಾಯ್ದಿರಿಸುವುದು ಹಾಗೂ ಅವಶ್ಯಕತೆ ಇದ್ದಲ್ಲಿ ಮಾತ್ರ ಮಂಡಲಿಯ ಪರಿಶೀಲನೆಗೆ ಸಲ್ಲಿಸಬೇಕು.

ಅಧ್ಯಕ್ಷರು,

ಕ. ಶಾ. ಪ & ಮೌ. ನಿ. ಮಂಡಲಿ

ನೂಕ್ತ ಕ್ರಮಕ್ಕಾಗಿ: -

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) ರವರಿಗೆ **(ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು)**
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ **(ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು)**
3. ಸಹಾಯಕ ನಿರ್ದೇಶಕರು, ಗಣಕ ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಇವರಿಗೆ **(ಮಂಡಲಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ).**

ಪ್ರತಿಯನ್ನು: -

1. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, 6ನೇ ಮಹಡಿ, ಬಹುಮಹಡಿ ಕಟ್ಟಡ, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು- 560 001. ರವರಿಗೆ ಮಾಹಿತಿಗಾಗಿ.
2. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ), 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು- 560 012 ರವರಿಗೆ, ಮಾಹಿತಿಗಾಗಿ.
3. ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಮೌಲಾನಾ ಅಬುಲ್ ಕಲಾಂ ಆಜಾದ್ ಭವನ, ನಂ.16ಸಿ ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ ವಸಂತನಗರ ಬೆಂಗಳೂರು - 560052.
4. ಕಾರ್ಯನಿರ್ವಾಹಕ ನಿರ್ದೇಶಕರು, KRIES, ನಂ. 8, ಎಂ.ಎಸ್.ಬಿ-1,6 & 7ನೇ ಮಹಡಿ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು-560052.
5. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಂ.16/ಡಿ, ದೇವರಾಜ ಅರಸು ಭವನ, 3ನೇ ಮಹಡಿ ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ ವಸಂತನಗರ ಬೆಂಗಳೂರು - 560052.
6. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿ ಕಟ್ಟಡ, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು- 560 001.
7. ಮಾನ್ಯ ಅಧ್ಯಕ್ಷರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 ರವರ ಆಪ್ತಶಾಖೆಗೆ ಮಾಹಿತಿಗಾಗಿ.
8. ನಿರ್ದೇಶಕರು, (ಪಿಯು ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 ರವರಿಗೆ ಮಾಹಿತಿಗಾಗಿ.
9. ನಿರ್ದೇಶಕರು, (ಪರೀಕ್ಷೆಗಳು) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 ರವರಿಗೆ ಮಾಹಿತಿಗಾಗಿ.
10. ಜಂಟಿ ನಿರ್ದೇಶಕರು (ಪಿ.ಯು ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 ರವರಿಗೆ ಮಾಹಿತಿಗಾಗಿ.
11. ಹೆಚ್ಚುವರಿ/ಕಛೇರಿ ಪ್ರತಿ.